## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** 1) ಶ್ರೀ ಬಿ.ಎನ್ ಇಟಗಿಮಠ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ, 2) ಶ್ರೀ ಬಿ.ಎಚ್ ಮಣ್ಣೂರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ನಿವೃತ್ತ) ಬೆಳದಡಿ ಗ್ರಾಮ ಪಂಚಾಯಿತಿ, 3) ಶ್ರೀ ಚಂದುಸ್ವಾಮಿ ದೊಡ್ಡಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸಿನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/519/ಗ್ರಾಪಂಕಾ/2016, ದಿನಾಂಕ: 12-09-2016.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ.ಸಂಖ್ಯೆ: UPLOK-1/DE/380/2016/ARE-10, ದಿನಾಂಕ: 10-10-2018.
3. ಸರ್ಕಾರದ ಸಮ ಸಂಖ್ಯೆಯ ಎರಡನೇ ಕಾರಣ ಕೇಳುವ ನೋಟೀಸ್ ದಿನಾಂಕ:09-11-2018.
4. ಶ್ರೀ ಬಿ.ಎನ್ ಇಟಗಿ ಮಠ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ(ಪ್ರಸ್ತುತ ಚಿಂಚೋಳಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ) ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ: 20-12-2018.
5. ಶ್ರೀ ಬಿ.ಎಚ್ ಮಣ್ಣೂರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ನಿವೃತ್ತ) ಬೆಳದಡಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ ಇವರು ಸರ್ಕಾರದ ಎಡರನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ, ದಿನಾಂಕ:06.01.2019

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಬಿ.ಎನ್ ಇಟಗಿ ಮಠ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ(ಪ್ರಸ್ತುತ ಚಿಂಚೋಳಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ ಮತ್ತು ಶ್ರೀ ಚಂದುಸ್ವಾಮಿ ದೊಡ್ಡಸ್ವಾಮಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರಂತೆ ವಿಚಾರಣೆ ನಡೆಸಲು ಹಾಗೂ ಶ್ರೀ ಬಿ.ಎಚ್ ಮಣ್ಣೂರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಹಾಲಿ ನಿವೃತ್ತ) ಬೆಳದಡಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(2)(ಬಿ)(i)ರಡಿ ಮಂಜೂರಾತಿ ನೀಡಿ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14-ಎ ರಂತೆ ವಿಚಾರಣೆ ನಡೆಸಲು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿತ್ತು, ಅದರಂತೆ ವಿಚಾರಣಾಧಿಕಾರಿಗಳು(ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ) ಕೆಳಕಂಡಂತೆ ಆಪಾದನೆಗಳ ಕುರಿತು ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**"ದೋಷಾರೋಪಣೆ":**

"ದೂರುದಾರರು ನೀಡಿರುವ ದೂರಿನಲ್ಲಿರುವ ದಾಖಲೆಗಳು ಮತ್ತು ಜಾಬ್‌ಕಾರ್ಡ್‌ದಾರರ ಪಟ್ಟಿಯನ್ನು ಪರಿಶೀಲಿಸಲಾಗಿ, ಅದರಲ್ಲಿ ಸಾಕಷ್ಟು ಮಂದಿ ಬೇರೆ ಕಡೆ ವಾಸವಾಗಿದ್ದು, ಕೆಲವು ಮಂದಿ ಮೃತಪಟ್ಟಿದ್ದು, ಇನ್ನು ಕೆಲವು ಮಂದಿ ಸರ್ಕಾರಿ ನೌಕರರಾಗಿದ್ದು, ಅವರುಗಳ ಹೆಸರಿನಲ್ಲಿ ಜಾಬ್‌ಕಾರ್ಡ್ ನೀಡಿರುವ ಬಗ್ಗೆ ಪಟ್ಟಿಯಲ್ಲಿ ನಮೂದಾಗಿದೆ. ಲಭ್ಯವಿರುವ ದಾಖಲೆಗಳುನುಸಾರ ಒಟ್ಟು 1188 ಜನ ಜಾಬ್‌ಕಾರ್ಡ್‌ದಾರರ ಹೆಸರುಗಳಿದ್ದು, ಅವರುಗಳ ಪೈಕಿ ಈ ಕಾಮಗಾರಿಗಳಿಗೆ ಒಟ್ಟು 217 ಜನ/ಕಾರ್ಮಿಕರನ್ನು ಉಪಯೋಗಿಸಿಕೊಂಡಿರುವುದು ಕಂಡು ಬಂದಿರುತ್ತದೆ. ಹಾಗೂ ಆ 217 ಜನ ಕಾರ್ಮಿಕರಿಗೆ ತಲಾ ರೂ. 1200/-ರಂತೆ ಒಟ್ಟು ರೂ. 2,60,400/- ಹಣವನ್ನು ನೀಡಿರುವ ಬಗ್ಗೆ ದಾಖಲಾತಿಗಳಲ್ಲಿ ನಮೂದಾಗಿದೆ. ಆದರೆ, ಆ ಕಾರ್ಮಿಕರ ಖಾತೆಗಳಿಗೆ ಹಣ ಜಮಾ ಆಗಿರುವ ಬಗ್ಗೆ ಮತ್ತು ಅವರು ಜಾಬ್‌ಕಾರ್ಡ್‌ಗಳನ್ನು ಹೊಂದಿರುವ ಬಗ್ಗೆ, ಆ ಜಾಬ್‌ಕಾರ್ಡ್‌ಗಳ ಪ್ರತಿಗಳನ್ನು ಹಾಜರುಪಡಿಸಿಲ್ಲ. ಲಭ್ಯವಿರುವ ದಾಖಲೆಗಳ ಪ್ರಕಾರ 2010-11 ಮತ್ತು 2011-12 ನೇ ಸಾಲಿನಲ್ಲಿ ಅಂದಾಜು ರೂ. 2,60,400/-ಗಳನ್ನು ಜಾಬ್‌ಕಾರ್ಡ್‌ದಾರರಿಗೆ ಪಾವತಿಸದೆ ನಕಲಿ ಸಹಿ ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿದ್ದಾರೆ ಎನ್ನಲಾದ ಅರೋಪಗಳ ಬಗ್ಗೆ.

ವಿಚಾರಣಾಧಿಕಾರಿಯವರು, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ವರದಿಯಲ್ಲಿ ಸದರಿ ಆಪಾದಿತ ನೌಕರರಗಳ ಮೇಲಿನ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ. ಇವರುಗಳ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಸದರಿಯವರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದಕೊಂಡು ದುರ್ನಡತೆ ಎಸಗಿರುವುದು ಕಂಡುಬರುವ ಹಿನ್ನಲೆಯಲ್ಲಿ ಈ ಆಪಾದಿತ ನೌಕರರುಗಳ ಮೇಲಿನ ಆಪಾದನೆಗಳ ಕುರಿತು ಮಾನ್ಯ ಲೋಕಾಯುಕ್ತರು ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತರೆ.

**A. It is hereby recommended to the government for imposing penality of recovering a sum of Rs. 86,800/- from the salary and allowsnces payble to DGO- Sri B.N Itagimatha, panchayatha development officer, Beladadi Gram panchayatha (presently panchayatha development officer, chincholi grama panchayatha Gadaga Taluk and District)**

**B. It is hereby recommended to the government for imposing penality of recovering a sum of Rs. 86,800/- from the salary and allowsnces payble to DGO-2Sri B.H. Mannur panchayatha development officer, Gram panchayatha presently panchayatha development officer(retried) Beladadi panchayatha, Gadaga Taluk and District.**

**C. It is hereby recommended to the government for imposing penality of recovering a sum of Rs. 86,800/- from the salary and allowsnces payble to DGO-3 Sri Chnduswamy Doddamani, panchayatha development officer, Beladadi Gram panchayatha, Gadaga Taluk and District( presently Hiranandihala Gram panchayatha, Kushtagi Taluk, Koppal District)**

ಈ ಸಂಬಂಧ ಆರೋಪಿತ ನೌಕರರಿಗೆ ನಿಯಮಾನುಸಾರ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲಾಗಿತ್ತು. ಸದರಿ ನೋಟೀಸಿಗೆ ಆಪಾದಿತ ನೌಕರರುಗಳು ಮೇಲೆ ಕ್ರಮ ಸಂಖ್ಯೆ (4) ಮತ್ತು (5) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಶ್ರೀ ಬಿ.ಎನ್ ಇಟಗಿಮಠ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ(ಪ್ರಸ್ತುತ ಚಿಂಚೊಳಿ ಗ್ರಾಮ ಪಂಚಾಯಿತಿ) ಗದಗ ತಾಲ್ಲೂಕು, ಗದಗ ಜಿಲ್ಲೆ ಇವರು ಸಲ್ಲಿಸಿರುವ ಲಿಖಿತ ಹೇಳಿಕೆ/ಸಮಜಾಯಿಷಿಗಳು ಕೆಳಕಂಡಂತೆ ಇರುತ್ತದೆ.

- ಈ ಪ್ರಕರಣದಲ್ಲಿ ತಾವು ಮೊಟ್ಟಮೊದಲಿಗೆ 2010-11ರಲ್ಲಿ ಅಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿರಲಿಲ್ಲ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಕೂಡ ವಿಚಾರಣಾ ಸಮಯದಲ್ಲಿ ತಾವು ವಿಚಾರಣಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಆದರೂ ಕೂಡ ವಿಚಾರಣಾಧಿಕಾರಿಗಳು ಮತ್ತು ಮಂಡನಾಧಿಕಾರಿಗಳು ವಿಚಾರಣೆಯನ್ನು ಕೈಗೆತ್ತಿಕೊಂಡು ವಿಚಾರಣೆ ಮುಂದುವರೆಸಿ ದೂರುದಾರರನ್ನು ಸಾಕ್ಷಿಯನ್ನಾಗಿ ಮಾಡಿಕೊಂಡಿರುವುದು ಸರಿಯಷ್ಟೇ, ಮುಂದುವರೆದಂತೆ ಮಂಡನಾಧಿಕಾರಿಯವರು ಈ ಪ್ರಕರಣವನ್ನು ತನಿಖೆ ಮಾಡಿದಂತಹ ತನಿಖಾಧಿಕಾರಿಯವರನ್ನು ಸಹ ಸಾಕ್ಷಿಯನ್ನಾಗಿ ಮಾಡಿರುತ್ತಾರೆ. ಆದರೆ ದೂರು ನೀಡಿರುವ ದೂರಾಗಲೀ, ಸಾಕ್ಷಿಯಾಗಲೀ ತಮಗೆ ಸಂಬಂಧಪಟ್ಟಿರುವುದಿಲ್ಲ.
- ಆದರೆ ಇಲ್ಲಿ ಪ್ರಮುಖವಾದ ಅಂಶವೇನೆಂದರೆ ಸದರಿ ಈ ಅವಧಿಯಲ್ಲಿ ತಾವು ಬೆಳದಡಿ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಅಂದರೆ ಮೇಲಿನ ದಿನಾಂಕದ ಹಿಂದಿನ ಅವಧಿ ಅಂದರೆ ದಿನಾಂಕ: 12.06.2008 ರಿಂದ 29.05.2010 ರವರೆಗೆ ತಾವು ಸೇವೆ ಸಲ್ಲಿಸಿದ್ದು ಇರುತ್ತದೆ.
- ಕಂಡಿಕೆ 1 ರಲ್ಲಿ 2010-11, 2011-12ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಳದಡಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಎಲ್.ಐ.ಸಿ ಏಜೆಂಟ್ ಡಾ॥ ಕೆ.ಇ.ಬಿ ಗುತ್ತಿಗೆದಾರರು ಕ್ಲರ್ಕ್ ಹೆಂಡತಿ ಹೆಸರಿನಲ್ಲಿ ಬಿಲ್ ತೆಗೆದಿರುತ್ತಾರೆಂದು ದೂರಿನಲ್ಲಿ ಸಲ್ಲಿಸಿದ್ದು ಇರುತ್ತದೆ. ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿಯಲ್ಲಿ ಸರ್ಕಾರಿ ನೌಕರನು ಹೊರತುಪಡಿಸಿ ಬೇರೆ

ಯಾವ ವ್ಯಕ್ತಿಯು ನಮೂನೆ 6 ಫಾರಂನಲ್ಲಿ ಕೆಲಸ ಕೇಳಿ ಅರ್ಜಿ ಕೊಟ್ಟರೆ ಸದರಿ ಅರ್ಜಿಯು ನಿಯಮದ ಪ್ರಕಾರ ಕೆಲಸ ನಿರ್ವಹಿಸಲು ಬರುತ್ತದೆ. ಮತ್ತು ಬಿಲ್‌ಕಲೆಕ್ಟರ್ ಹೆಂಡತಿ ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಹೆಂಡತಿಗೆ ಕೆಲಸ ಕೊಡಬಾರದಂತ ಈ ಯೋಜನೆಯಲ್ಲಿ ಯಾವುದೇ ಷರತ್ತು ಇರುವುದಿಲ್ಲ ಹಾಗೂ ಕೂಲಿಕಾರರ ಸಹಿ ಹಾಗೂ ಹಾಜರಾರಿಗಳ ಕಾಮಗಾರಿ ನಿರ್ವಹಿಸುತ್ತಿರುವ ಕಾಯಕಬಂಧು ಮಿತ್ರರನ್ನು ದಾಖಲಿಸಿಕೊಳ್ಳುತ್ತಾರೆ. ನಂತರ ಎಲ್ಲಾ ಕಾಮಗಾರಿಗಳನ್ನು ಹಿರಿಯ ಸಹಾಯಕ ಇಂಜಿನಿಯರ್ ಅಳತೆ ಪುಸ್ತಕದಲ್ಲಿ ದಾಖಲಿಸಿದ ನಂತರ ತಾಲ್ಲೂಕು ಪಂಚಾಯಿತಿ ಕಾರ್ಯನಿವಾಹಕ ಅಧಿಕಾರಿಗಳ ಸಹಿ ಪಡೆದು ಅಧ್ಯಕ್ಷರು ಪರಿಶೀಲಿಸಿದ ನಂತರ ಕೂಲಿಕಾರರ ಖಾತೆಗೆ ಹಣ ಸಂದಾಯ ಮಾಡಿದ್ದು ಇರುತ್ತದೆ. ಕಾರಣ ಕಾಮಗಾರಿಗಳಲ್ಲಿ ಯಾವ ಅವ್ಯವಹಾರ ಮಾಡಿಲ್ಲ.

- ಎನ್.ಎಂ.ಆರ್ ಸೀಟ್‌ಗಳಲ್ಲಿ 7 ಜನರ ಹೆಸರು ನಮೂದಿಸಿದ್ದು, ದೂರು ಅರ್ಜಿ ಕ್ರಮ ಸಂಖ್ಯೆ: 2 ಇರುವ ಈರವ್ವ ವಸನಪ್ಪ ಬಡಿಗೇರ ಇವರು 2009 ರಲ್ಲಿ ಜೀವಂತವಿದ್ದು, ನಂತರ ನಿಧನ ಹೊಂದಿದ್ದು, ಇವರ ನಿಧನ ದಿನಾಂಕವನ್ನು ಅರ್ಜಿಯಲ್ಲಿ ನಮೂದಿಸಿಲ್ಲ. ಇದು ಕೂಡ ಸತ್ಯಕ್ಕೆ ದೂರವಾದ ಸಂಗತಿ. ಅರ್ಜಿ ಕ್ರಮ ಸಂಖ್ಯೆ:6 ಶ್ರೀ ನಂದಕುಮಾರ್ ಕೃಷ್ಣಪ್ಪ ಹೊಸಮನಿ ಇವರು 2009 ರಲ್ಲಿ ಕೆ.ಇ.ಬಿ ಗುತ್ತಿಗೆದಾರರ ಲೈಸೆನ್ಸ್ ಹೊಂದಿರಲಿಲ್ಲ ಮತ್ತು ಇವರು ತಮ್ಮ ಸವಂತ ಜಮೀನಿನಲ್ಲಿ ಬಾಳೆ ಹಾಗೂ ತೆಂಗಿನ ಸಸಿಗಳನ್ನು ಸದರಿ ಯೋಜನೆಯಡಿಯಲ್ಲಿ ಪಡೆದುಕೊಂಡು ಎನ್.ಎಂ.ಆರ್‌ನಲ್ಲಿ ತಮ್ಮ ಖಾತೆಗೆ ಹಣವನ್ನು ಜಮೆ ಮಾಡಿಕೊಂಡಿರುತ್ತಾರೆ. ಮತ್ತು ದೂರು ಅರ್ಜಿ ಸಂಖ್ಯೆ: 3,4,5,6,7 ಇವುಗಳು 2010-11 ಮತ್ತು 2011-12ನೇ ಸಾಲಿನಲ್ಲಿ ತೋರಿಸಿದ್ದು, ಈ ಅವಧಿಯು ತಮ್ಮ ಅವಧಿಗೆ ಸಂಬಂಧಿಸಿರುವುದಿಲ್ಲ. ಆದ ಕಾರಣ ಕಂಡಿಕೆ 1ರಲ್ಲಿ ಮಾಡಿರುವ ಆಪಾದನೆಯು ಸತ್ಯಕ್ಕೆ ದೂರವಾದದು.
- ದೂರು ಅರ್ಜಿಯಲ್ಲಿ 2010-11, 2011-12ನೇ ಸಾಲಿನಲ್ಲಿ ಸೊರಟೂರು ಗ್ರಾಮ ಪಂಚಾಯಿತಿಯಲ್ಲಿ ತಾವು ಕಾರ್ಯನಿರ್ಹಿರುವುದಿಲ್ಲ. ತಾವು ಕಾರ್ಯನಿರ್ವಹಿಸಿದ ಅವಧಿಯು ದಿನಾಂಕ:29.05.2010ಕ್ಕೆ ತಮ್ಮ ಅವಧಿಯು ಮುಗಿದಿರುತ್ತದೆ. ಈ ಆಪಾದನೆಯು ತಮಗೆ ಸಂಬಂಧ ಬರುವುದಿಲ್ಲ.
- ಕಂಡಿಕೆ-3 ರಲ್ಲಿ ದೂರಿನ ಕುರಿತು, ವಿಚಾರಣಾಧಿಕಾರಿಗಳ ವರದಿಯು 5(7) ರಲ್ಲಿ 1ನೇ ಆಪಾದಿತ ಸರ್ಕಾರಿ ನೌಕರನು ತಡಸಾ ಹಾಗೂ ರೋಣ ತಾಲ್ಲೂಕು ಕುರಡಗಿ ಗ್ರಾಮಗಳಲ್ಲಿ ಬಾರಿ ಪ್ರಮಾಣದ ಆಸ್ತಿ ಹೊಂದಿರುತ್ತಾರೆಂದು ಆಪಾದಿಸಿದ್ದು, ಈ ಬಗ್ಗೆ ರೋಣ ಮತ್ತು ಶಿಗ್ಗಾಂವ್ ತಾಲ್ಲೂಕಿನ ತಹಸೀಲ್ದಾರ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಶಿಗ್ಗಾಂವ್ ತಾಲ್ಲೂಕು, ತಡಸಾ ಮತ್ತು ರೋಣ ತಾಲ್ಲೂಕಿನ ಕುರಡಗಿ ಗ್ರಾಮಗಳಲ್ಲಿ ಆಸ್ತಿ ಇದ್ದ ಬಗ್ಗೆ ವಿಚಾರಣೆ ಕೈಗೊಳ್ಳಲಾಗಿ ಯಾವುದೇ ಆಸ್ತಿಗಳು ಆಸ್ತಿಗಳು ಇಲ್ಲ ಎಂಬುದಾಗಿ ವರದಿ ಸಲ್ಲಿಸಿರುತ್ತಾರೆಂದು ತನಿಕಾಧಿಕಾರಿ ತಿಳಿಸಿದ್ದಾರೆ ಎಂಬುದನ್ನು ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ಸ್ಪಷ್ಟವಾಗಿ ತಿಳಿಯಪಡಿಸಿದ್ದಾರೆ.
- ಈ ವರದಿಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ತಾವು ಆ ಅವಧಿಯಲ್ಲಿ ಕರ್ತವ್ಯದಲ್ಲಿ ಇರಲಿಲ್ಲ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ ಮತ್ತು ತಾವು ಕರ್ತವ್ಯ ನಿರ್ವಹಿಸುತ್ತಿರಲಿಲ್ಲ. ಆಗ ತಾವು ಅಮಾನತ್ತಿನಲ್ಲಿ ಇದ್ದೇನೆಂಬುದಕ್ಕೆ ದಾಖಲೆಗಳನ್ನು ಕೂಡ ತಾವು ತಮ್ಮ ಅವಗಾಹನೆಗೆ ಸಲ್ಲಿಸುತ್ತೇನೆ ಎಂದು ತಿಳಿಸಿರುತ್ತಾರೆ.
- ಆದ್ದರಿಂದ ಈ ಪ್ರಕರಣದಲ್ಲಿ ತಮಗೆ ನೀಡಿರುವ ನಗದು ಬಾಬ್ತು ಕಟ್ಟುವ ಶಿಕ್ಷೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಶ್ರೀ. ಬಿ.ಎಚ್. ಮಣ್ಣೂರ, ನಿವೃತ್ತ ಕಾರ್ಯದರ್ಶಿ, ಪ್ರಭಾರ ಪಿ.ಡಿ.ಓ ಬೆಳದಡಿ ಗ್ರಾಮ ಪಂಚಾಯಿತಿ, ರವರು ಸಲ್ಲಿಸಿರುವ ಲಿಖಿತ ಸಮಜಾಯಿಷಿಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:-

- ತಮ್ಮ ಅವಧಿಯಲ್ಲಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಉದ್ಯೋಗಖಾತ್ರಿ ಚೀಟಿ/ಜಾಬ್‌ಕಾರ್ಡ್ ವಿತರಣೆ ಮಾಡಿರುವುದಿಲ್ಲವೆಂದು ಹಾಗೂ ಈಗಾಗಲೇ ಉದ್ಯೋಗ ಚೀಟಿ ಪಟ್ಟಿಯಲ್ಲಿ ಇರುವ ಕೂಲಿ ಕಾರ್ಮಿಕರು 20 ವರ್ಷದಿಂದ ಗೋವಾದಲ್ಲಿ ಇದ್ದಾರೆ. ಆಪಾದನೆ ಮಾಡಿರುತ್ತಾರೆ. ಆದರೆ ಸತ್ಯಕ್ಕೆ ದೂರವಾದದ್ದು ಇರುತ್ತದೆ. ಏಕೆಂದರೆ ಕೂಲಿ ಕಾರ್ಮಿಕರು ನಿರಂತರವಾಗಿ ಗೋವಾದಲ್ಲಿ ಇರುವುದಿಲ್ಲ. ಸದರಿಯವರು ತಮ್ಮ ಸ್ವಗ್ರಾಮಕ್ಕೆ ಬರುವುದು ಹೋಗುವುದು ಮಾಡುತ್ತಾರೆ. ಏಕೆಂದರೆ ಅವರ ಜಮೀನು ಹಾಗೂ ವಾಸದ ಮನೆ ಇಲ್ಲಿಯೇ ಇದ್ದುದ್ದರಿಂದ ಹೆಚ್ಚಿನ ಅಂಶ ಬೆಳದಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ

ಗ್ರಾಮದಲ್ಲಿ ವಾಸವಾಗಿರುತ್ತಾರೆ. ಇಲ್ಲಿ ವಾಸವಾಗಿದ್ದ ಸಮಯದಲ್ಲಿ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಸದರಿಯವರಿಗೆ ಕೂಲಿ ಹಣವನ್ನು ಪಾವತಿಸಲಾಗಿದೆ.

- ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕಾಮಗಾರಿ ನಿರ್ವಹಣೆಯಲ್ಲಿ ಪೋತಿಯಾದ ಫಲಾನುಭವಿಗಳಿಗೆ ಹಣ ವಿತರಣೆ ಮಾಡಿರುತ್ತಾರೆ ಅಂತಾ ಆಪಾದನೆ ಮಾಡಿರುತ್ತಾರೆ. ತಾವು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಪೋತಿಯಾದ ಫಲಾನುಭವಿಗಳಿಗೆ ಹಣವನ್ನು ಪಾವತಿಸಿರುವುದಿಲ್ಲ ಅಂತಾ ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ.
- ಆಪಾದಿತ ದೂರಿನ ಅನ್ವಯದಲ್ಲಿ 2010-11ನೇ ಸಾಲಿನಲ್ಲಿ ಸಂಪೂರ್ಣವಾಗಿ ಶ್ರೀ ನೇಕಾರ ನಿವೃತ್ತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸೇವೆ ಸಲ್ಲಿಸಿರುತ್ತಾರೆ ಮತ್ತು 2011-12ನೇ ಸಾಲಿನಲ್ಲಿ 01.09.2012 ರವರೆಗೆ ಸದರಿಯವರು ಸೇವೆ ಸಲ್ಲಿಸಿರುತ್ತಾರೆ ನಂತರ ಉಳಿದ 9 ತಿಂಗಳಲ್ಲಿ ಅವಧಿಯಲ್ಲಿ ಚಂದುಸಾಬ ದೊಡ್ಡಮನಿ ಮತ್ತು ತಾವು ಬಿ.ಎಚ್. ಮಣ್ಣೂರ ಹಾಗೂ ಇಟಗಿಮಠ ಅಂತಾ 3 ಜನೆ ಸೇವೆ ಸಲ್ಲಿಸಿರುತ್ತೇನೆ. ಅದರಲ್ಲಿ ತಾವು ಸುಮಾರು 6 ತಿಂಗಳವರೆಗೆ ಕರ್ತವ್ಯನಿರ್ವಹಿಸಿರುತ್ತೇನೆ. ಆ ಅವಧಿಯಲ್ಲಿ ತಾವು ಕರ್ತವ್ಯಲೋಪವನ್ನು ಎಸಗಿರುವುದಿಲ್ಲ.
- 2ನೇ ಆಪಾದಿತ ನೌಕರರಾದ ತಾವು ತಮ್ಮ ಕರ್ತವ್ಯದ ಪಾಲನೆಯನ್ನು ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸುತ್ತೇನೆ. ತಮ್ಮ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದು ಬಂದಿರುವುದಿಲ್ಲ ಎಂದು ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ ಹಾಗೂ ತಮ್ಮನ್ನು ದೋಷಾರೋಪಣಾ ಪಟ್ಟಿಯಿಂದ ಕೈಬಿಡಬೇಕೆಂದು ಕೋರಿರುತ್ತೇನೆ.

3ನೇ ಆಪಾದಿತ ನೌಕರರಾದ ಶ್ರೀ ಚಂದುಸ್ವಾಮಿ ದೊಡ್ಡಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ, ಇವರು ಸರ್ಕಾರದ ಜಾರಿಯಾದ ಎರಡನೇ ಕಾರಣ ಕೇಳುವ ನೋಟಿಸ್‌ಗೆ ಯಾವುದೇ ಲಖಿತ ಹೇಳಿಕೆ/ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ.

ಆಪಾದಿತ ನೌಕರರು ಸಲ್ಲಿಸಿರುವ ಲಿಖಿತ ಹೇಳಿಕೆ/ ಸಮಜಾಯಿಷಿಗಳನ್ನು ಹಾಗೂ ದೂರುದಾರರು ನೀಡಿರುವ ದೂರಿನಲ್ಲಿರುವ ಅಂಶಗಳನ್ನು ಹಾಗೂ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯ ಮೇಲೆ ಮಾನ್ಯ ಉಪ ಲೋಕಾಯುಕ್ತರು ಮಾಡಿರುವ ಶಿಫಾರಸ್ಸನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳು ಅಂಶಗಳು ಕಂಡುಬರುತ್ತವೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ವಿವರವಾಧ ಕಾರಣಗಳನ್ನು ನೀಡಿರುತ್ತಾರೆ. ಪ್ರಮುಖವಾಗಿ ವರದಿಯ ಕಂಡಿಕೆ 42 ರಿಂದ 46 ರಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳನ್ನು ಈ ಕೆಳಗಿನಂತೆ ಪುನರುಚ್ಛರಿಸಿದೆ:-

- It is pertinent to note that, moreso, DW-1 (DGO-2) has categorically admitted as true that, he was working as Secretary and in charge Panchayath Development Officer in Beladadi Grama Panchayath from 23.08.2011 to 14.03.2012 and Beladadi Thanda, Kabalakabalayatha katti and lavaba pura villages com eunder said Gram Panchayath and they have to do developmental works and distribution of job cards to the beneficiaries under MNREGA scheme is also one of his duties.
- It is worthwhile to note that, similarly, DW-2(DGO-1) has also vividly and clearly admitted as true that, he was working, as Secretary in Beladadi Grama Panchayath from 27.06.2008 to 29.05.2010 and Beladadi Thanda, Kabalakabalayatha katti and lavaba pura villages come under said Grama

Panchayath and they have to do developmental works and distribution of job cards to the beneficiaries under MNREGA scheme is also one of his duties.

- It is worthy to note that, above all, the DGO No.3 who is placed as Ex parte, did not appear before this Enquiry Authority by taking his own defence to say and to show that the adverse inference can also be drawn against the DGO NO.3 as per Section 114 of the Indian Evidence Act, 1872.
- On careful analysis and appreciation of oral and documentary evidence placed on record, it is manifestly clear that, the evidence of PW-1 and PW-2 are fully corroborated and consistent with Ex P-1 to P-15 and the same are inspiring confidence of this enquiry authority to rely and to act upon and there is nothing brought on record to disbelieve the same. In my considered view, the case of disciplinary authority and in particular, Ex.P-p-15 Investigation Report of PW-2 is acceptable.
- For the reasons stated above and observations made in the light of depositions of PW-1, PW-2 and DW-1 and DW-2 and Ex P-1 to 15 and D-1 to 8 and relevant provisions of law and under the given set of facts and circumstances of this enquiry, I have arrived at inevitable conclusion to hold that, the Disciplinary Authority through its presenting officer is successful in proving the charge framed and leveled against DGO s 1 to 3 up to the standard of preponderance of probabilities and to the satisfaction of this enquiry authority, to record my findings in the affirmative as proved.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ದೂರುದಾರರು ಸಲ್ಲಿಸಿರುವ ದೂರಿನಲ್ಲಿನ ಅಂಶಗಳು, ವಿಚಾರಣಾಧಿಕಾರಿಯವರು ಸಲ್ಲಿಸಿರುವ ವರದಿ ಹಾಗೂ ಆಪಾದಿತ ನೌಕರರುಗಳು ಸಲ್ಲಿಸಿದ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ ಸದರಿಯವರ ಮೇಲಿನ ಆಪಾದನೆಗಳನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣಗಳು ಕಂಡುಬರುತ್ತಿಲ್ಲವಾದ್ದರಿಂದ ಸದರಿ ಆಪಾದಿತ ನೌಕರರುಗಳ ವಿರುದ್ಧದ ವಿಚಾರಣಾ ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳ ವರದಿ, ತತ್ಸಂಬಂಧಿತ ಮಾನ್ಯ ಉಪ ಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(iv) ರ ಅಡಿಯಲ್ಲಿ ನಿರ್ದಿಷ್ಟ ಪಡಿಸಿದಂತೆ 1) ಶ್ರೀ.ಬಿ.ಎನ್. ಇಟಗಿಮಠ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ (ಪ್ರಸ್ತುತ ಚಿಂಚೋಳಿ ಗ್ರಾಮ ಪಂಚಾಯಿತಿ), ಗದಗ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ರೂ. 86,800/- ಗಳನ್ನು ಸದರಿಯವರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ದಂಡನೆ, 3) ಶ್ರೀ ಚಂದುಸ್ವಾಮಿ ದೊಡ್ಡಮನಿ, ಪಿ.ಡಿ.ಓ ಬೆಳದಡಿ ಗ್ರಾಮ ಪಂಚಾಯಿತಿ ಗದಗ ತಾಲ್ಲೂಕು ಮತ್ತು ಜಿಲ್ಲೆ, (ಪ್ರಸ್ತುತ ಹಿರೇನಂದಿಹಾಳ ಗ್ರಾಮ ಪಂಚಾಯಿತಿ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ) ಇವರಿಗೆ ರೂ. 86,800/-ಗಳನ್ನು ಸದರಿಯವರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ದಂಡನೆಯನ್ನು ಮತ್ತು 2) ಶ್ರೀ. ಬಿ.ಹೆಚ್. ಮಣ್ಣೂರ, ಪಿ.ಡಿ.ಓ (ನಿವೃತ್ತ) ಬೆಳದಡಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಬಿ)ರಡಿಯಲ್ಲಿನ ಪ್ರದತ್ತ ಅಧಿಕಾರವನ್ನು ರೂ.86,800/-ಗಳನ್ನು ಸದರಿಯವರಿಗೆ ಪ್ರಾಪ್ತವಾಗುವ ಪಿಂಚಣಿಯಿಂದ ವಸೂಲು ಮಾಡುವ ದಂಡನೆಯನ್ನು ವಿಧಿಸಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/519/ಗ್ರಾಪಂಕಾ/2016,**
**ಬೆಂಗಳೂರು, ದಿನಾಂಕ:17-01-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 8(iv) ರಡಿಯಲ್ಲಿ ನಿರ್ದಿಷ್ಟ ಪಡಿಸಿದಂತೆ 1ನೇ ಆಪಾದಿತ ನೌಕರರಾದ ಶ್ರೀ.ಬಿ.ಎನ್. ಇಟಗಿಮಠ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ,

ಬೆಳದಡಿ ಗ್ರಾಮ ಪಂಚಾಯಿತಿ (ಪ್ರಸ್ತುತ ಚಿಂಚೋಳಿ ಗ್ರಾಮ ಪಂಚಾಯಿತಿ), ಗದಗ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ರೂ. 86,800/- ಗಳನ್ನು ಸದರಿಯವರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ದಂಡನೆ, 3ನೇ ಆಪಾದಿತ ನೌಕರರಾದ ಶ್ರೀ ಚಂದುಸ್ವಾಮಿ ದೊಡ್ಡಮನಿ, ಪಿ.ಡಿ.ಓ ಬೆಳದಡಿ ಗ್ರಾಮ ಪಂಚಾಯಿತಿ ಗದಗ ತಾಲ್ಲೂಕು ಮತ್ತು ಜಿಲ್ಲೆ, (ಪ್ರಸ್ತುತ ಹಿರೇನಂದಿಹಾಳ ಗ್ರಾಮ ಪಂಚಾಯಿತಿ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ) ಇವರಿಗೆ ರೂ. 86,800/-ಗಳನ್ನು ಸದರಿಯವರ ವೇತನ ಹಾಗೂ ಭತ್ಯೆಗಳಿಂದ ವಸೂಲು ಮಾಡುವ ದಂಡನೆ ಮತ್ತು 2ನೇ ಆಪಾದಿತ ನಿವೃತ್ತ ನೌಕರರಾದ ಶ್ರೀ ಬಿ.ಹೆಚ್. ಮಣ್ಣೂರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿವೃತ್ತ) ಬೆಳದಡಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(ಬಿ)ರಲ್ಲಿ ನಿರ್ದಿಷ್ಟ ಪಡಿಸಿದಂತೆ ರೂ.86,800/-ಗಳನ್ನು ಸದರಿಯವರಿಗೆ ಪ್ರಾಪ್ತವಾಗುವ ಪಿಂಚಣಿಯಿಂದ ವಸೂಲು ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 14/01/2020.
(ಬಿ.ನವೀನ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-2, ರವರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಗದಗ ಜಿಲ್ಲೆ.
6) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗದಗ, ಗದಗ ಜಿಲ್ಲೆ.
7) ಶ್ರೀ ಬಿ.ಎನ್ ಇಟಗಿಮಠ, ಪಂಚಾಯಿತಿ ಅಭಿವೃದ್ಧಿ ಆಧಿಕಾರಿ, ಬೆಳದಡಿ (ಪ್ರಸ್ತುತ ಪಂಚಾಯಿತಿ ಅಭಿವೃದ್ಧಿ, ಅಧಿಕಾರಿ, ಚಿಂಚೋಳಿ ಗ್ರಾಮ ಪಂಚಾಯಿತಿ) ಗದಗ ತಾಲ್ಲೂಕು, ಗದಗ ಜಿಲ್ಲೆ
8) ಶ್ರೀ ಬಿ.ಎನ್ ಮಣ್ಣೂರು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ(ಹಾಲಿ ನಿವೃತ್ತ) ಬೆಳದಡಿ ಗ್ರಾಮ ಪಂಚಾಯಿತಿ, ತಾಲ್ಲೂಕು, ಗದಗ ಜಿಲ್ಲೆ
9) ಶ್ರೀ ಚಂದುಸ್ವಾಮಿ ದೊಡ್ಡಮನಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೆಳದಡಿ ಗ್ರಾಮ ಪಂಚಾಯಿತಿ (ಪ್ರಸ್ತುತ ಹಿರೇನಂದಿಹಾಳ ಗ್ರಾಮ ಪಂಚಾಯಿತಿ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ), ಗದಗ ತಾಲ್ಲೂಕು, ಗದಗ ಜಿಲ್ಲೆ.
10) ಗಣಕ ಕೋಶ.
11) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.